<u>ದಿನಾಂಕಃ 19-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ-</u>

ನಾನು ಟಿ.ಎಂ.ಎಸ್ ಸಂಸ್ಥೆಯ ಅಧ್ಯಕ್ಷ ನೆಲೆಯಿಂದ ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದೂರನ್ನು ಸಲ್ಲಿಸಲು ನಾನು ಅನುಮತಿಯನ್ನು ಪಡೆದಿರುತ್ತೇನೆ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ಮುಂದುವರಿದು ನುಡಿಯುತ್ತಾರೆ ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿ ವರ್ಷ ನಾವು ಆಡಿಟ್ ಮಾಡುತ್ತೇವೆ ಹಾಗೂ ಜನರಲ್ ಬಾಡಿ ಮೀಟಿಂಗ್ ನಲ್ಲಿ ಅಪ್ರೂವಲ್ ತೆಗೆದುಕೊಳ್ಳುತ್ತೇವೆ. 2010-11 ರ ಆಡಿಟ್ ರಿಪೋರ್ಟ್ ಜನರಲ್ ಬಾಡಿ ಮೀಟಿಂಗ್ ನಲ್ಲಿ ಅಪ್ರೂವಲ್ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ಆಡಿಟ್ ರಿಪೋರ್ಟ್ ನ ಜೆರಾಕ್ಸ್ ಪ್ರತಿ ನಮ್ಮ ಸಂಸ್ಥೆಯಲ್ಲಿ ಇತ್ತು. 2010-11 ರ ಜನರಲ್ ಬಾಡಿ ಮೀಟಿಂಗ್ ನ ನೋಟೀಸ್ ನನಗೆ ಬಂದಿತ್ತು. ಆ ಸಮಯದಲ್ಲಿ ಸದರಿ ಮೀಟಿಂಗ್ ಗೆ ನಾನು ಹಾಜರಾಗಿರುವುದಿಲ್ಲ. ಸದರಿ ಮೀಟಿಂಗ್ ನಲ್ಲಿ ಆಡಿಟ್ ರಿಪೋರ್ಟ್ ಬಗ್ಗೆ ಆಕ್ಷೇಪಣೆ ಬಂದಿತ್ತೋ ಇಲ್ಲವೋ ಎಂದು ನನಗೆ ಹೇಳಲು ಆಗುವುದಿಲ್ಲ. ಈ ಬಗೆ ನಡವಳಿಯಲ್ಲಿ ಬರೆದಿರುವುದಿಲ್ಲ.

2012-13 ರಿಂದ ಯಾವುದೇ Audit Report ಡಿ.ಆರ್. ಕಛೇರಿಯಲ್ಲಿ submit ಆಗಿರುವುದಿಲ್ಲ. 2010-11 ರ ಆಡಿಟ್ ರಿಪೋರ್ಟ್ ಬಗ್ಗೆ ನಾನು ದೂರನ್ನು ನೀಡಿ ರೀಆಡಿಟ್ ಮಾಡುವ ಬಗ್ಗೆ ಕೇಳಿಕೊಂಡಿರುತ್ತೇನೆ. 2015-16 ರಲ್ಲಿ ಈ ಬಗ್ಗೆ ನಾವು ದೂರನ್ನು ನೀಡಿರುತ್ತೇನೆ. ಅದರ ಬಗ್ಗೆ ವಿಚಾರಣೆಯಾಗಿರುತ್ತದೆ. ನಿಪಿ-4 ವಿಚಾರಣಾ ವರದಿಯಲ್ಲಿ ಬೈಲಾ ಪ್ರಕಾರ

ಕಾರ್ಯನಿರ್ವಹಿಸಿಲ್ಲ ಎನ್ನುವ ಬಗ್ಗೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಹಣದ ದುರುಪಯೋಗವಾಗಿರುತ್ತದೆ ಎಂದು ನಿರ್ದಿಷ್ಟವಾಗಿ ಬರೆದಿರುವುದಿಲ್ಲ. 2010 ರಿಂದ 2012 ರವರೆಗೆ ಸಚ್ಚಿದಾನಂದ ಎನ್ನುವವರು ನಮ್ಮ ಸಂಸ್ಥೆಯ ಆಡೀಟರ್ ಆಗಿದ್ದರು. 2013 ರಿಂದ 2019 ರವರೆಗೆ ಸದರಿ ಸಚ್ಚಿದಾನಂದರವರೇ ನಮ್ಮ ಸಂಸ್ಥೆಯ ಆಡಿಟ್ ಮಾಡಿರುತ್ತಾರೆ. Society Registration Act ಪ್ರಕಾರ ಆಡೀಟರ್ ಅನ್ನು ಬದಲಾಯಿಸಬೇಕಾದಲ್ಲಿ ಸರ್ವ ಸಭೆಯಲ್ಲಿ ತೀರ್ಮಾನ ಆಗಬೇಕು ಎಂದರೆ ಸರಿ. ಆಡಳಿತ ಅಧಿಕಾರಿಯವರನ್ನು ಸರ್ಕಾರ ನೇಮಕ ಮಾಡಿದ್ದು ಆ ಸಮಯ ಸಂಪೂರ್ಣ ಸಂಸ್ಥೆಯ ಅಧಿಕಾರವನ್ನು ಎ.ಆರ್.ಸಿ.ಎಸ್ (ಸಹಕಾರ ಸಂಘಗಳ ಉಪನಿಬಂಧಕರು) ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ನಂತರದ ಚುನಾವಣೆಯಲ್ಲಿ ನಾನು ಅಧ್ಯಕ್ಷಳಾಗಿ ನೇಮಕಗೊಂಡಿರುತ್ತೇನೆ. ಸದರಿ ಉಪನಿಬಂಧಕರಿಂದ ಸಂಸ್ಥೆಯ ಅಧಿಕಾರವನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ಚಾರ್ಜ್ ಅನ್ನು ತೆಗೆದುಕೊಳ್ಳುವ ಸಮಯದಲ್ಲಿ ಸಂಸ್ಥೆಗೆ ಸಂಬಂಧಪಟ್ಟ ಪ್ರತಿಯೊಂದು ವಸ್ತು ಹಾಗೂ ದಾಖಲೆಗಳ ಬಗ್ಗೆ ನಾನು ಚಾರ್ಜ್ ಪಡೆದುಕೊಳ್ಳುತ್ತೇನೆ ಎಂದರೆ ಸರಿ. ಯಾವ ದಾಖಲೆಗಳು ಸಿಕಿಲ್ಲ ಈ ಬಗ್ಗೆ ಷರಾ ಬರೆಯಬೇಕು ಎಂದರೆ ಸಾಕ್ಷಿದಾರರು ಆ ಸಮಯದಲ್ಲಿ ಯಾವ ದಾಖಲೆಗಳು ಇರುವುದಿಲ್ಲ ಎಂದು ನನ್ನ ಗಮನಕ್ಕೆ ಬಂದಿರುವುದಿಲ್ಲ. ಉಪನಿಬಂಧಕರು ಚಾರ್ಜ್ ಅನ್ನು ನೀಡಿದ ಹಾಗೂ ನಾನು ಚಾರ್ಜ್ ಅನ್ನು ಪಡೆದುಕೊಂಡ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ನಮ್ಮ ಸಂಸ್ಥೆಯಲ್ಲಿ ದಾಖಲೆಗಳನ್ನು ನಿರ್ವಹಿಸಲು ಗುಮಾಸ್ತರು ಇರುತ್ತಾರೆ. ನಾನು ಚಾರ್ಜ್ ಅನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಗುಮಾಸ್ತರಾಗಿ ಅನಿತ ಹಾಗೂ ಸುಮಿತ್ರರವರು ಇದ್ದರು. ನಾನು ಚಾರ್ಜ್ ಅನ್ನು ಪಡೆದುಕೊಂಡ ನಂತರವೂ ಅವರು ಸದರಿ ಹುದ್ದೆಯಲ್ಲಿ ಮುಂದುವರೆದಿರುತ್ತಾರೆ ಎಂದರೆ ಸರಿ. ನಾನು ಸದರಿ ಇಬ್ಬರಿಗೂ ನೋಟೀಸ್ ಅನ್ನು ನೀಡಿರುತ್ತೇನೆ. ಸದರಿ ನೋಟೀಸ್ ಹಾಗೂ ಅವರಿಂದ ಪಡೆದುಕೊಂಡ ಉತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ನಾನು ಸದರಿಯವರಿಗೆ ನೋಟೀಸ್ ಅನ್ನು ನೀಡಿಲ್ಲ ಹಾಗೂ ಅವರಿಂದ ಯಾವುದೇ ಉತ್ತರವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3 ವರ್ಷಕ್ಕಿಂತ ಹಿಂದಿನ ದಾಖಲೆಗಳನ್ನು ಯಾವುದೇ ಸಂಸ್ಥೆಯು ಇಟ್ಟುಕೊಳ್ಳುವುದಿಲ್ಲ ಎಂದರೆ ಸಾಕ್ಷಿದಾರರು ನಾವು ಇಟ್ಟುಕೊಂಡಿದ್ದೇವೆ ಎನ್ನುತ್ತಾರೆ. ನಿಪಿ-10 ರೀಆಡಿಟ್ ವರದಿಯಲ್ಲಿ ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಸದರಿ ವರದಿಯನ್ನು ನೀಡಲಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಾನು ಕೆಲವೊಂದು Selected documents ಅನ್ನು ಮಾತ್ರ ನೀಡಿದ್ದು ರಾಜಕೀಯವಾಗಿ ಆರೋಪಿತರನ್ನು ತುಳಿಯುವ ಉದ್ದೇಶದಿಂದ ಆ ರೀತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಡಿ.ಸಿ.ಸಿ ಬ್ಯಾಂಕ್ ಅಕೌಂಟ್ ನಂ.262 ನಮ್ಮ ಹಳೆಯ ಪ್ರಿನ್ಸಿಪಲ್ ಶಕುಂತಲಾರವರಿಗೆ ಸೇರಿದ್ದು ಎಂದರೆ ಸರಿ. ಸದರಿ ಹಣವನ್ನೂ ಕೂಡಾ ಆರೋಪಿತರು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ನಿಪಿ-10 ರಲ್ಲಿ ತೋರಿಸಿದ್ದಾರೆ ಎಂದರೆ ಸರಿ. 9 FD

Bond ಗಳನ್ನು ಆಡೀಟರ್ ಗೆ ನೀಡಿಲ್ಲ ಎಂದರೆ ಸಾಕ್ಷಿದಾರರು ಅದು ನಮ್ಮ ಹತ್ತಿರ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ 9  ಬಾಂಡ್ ಗಳಿಂದ ಸುಮಾರು ಕೋಟಿಗಳಷ್ಟು ಎಫ್.ಡಿ ಇತ್ತು ಎಂದರೆ ಸರಿಯಲ್ಲ. FD Bond ಇಲ್ಲದೇ ಇದ್ದ ಕಾರಣ ಅದರ ಬಡ್ಡಿ ಎಲ್ಲಿಗೆ ಹೋಗಿರುತ್ತದೆ ಎಂದು ಗೊತ್ತಿಲ್ಲದೇ ಇದ್ದ ಕಾರಣ ಅದನ್ನೂ ಕೂಡಾ ಹಣ ದುರುಪಯೋಗದ ಬಗ್ಗೆ ನಮೂದು ಮಾಡಲಾಗಿರುತ್ತದೆ.

ಶಾಲಾ ಕಟ್ಟಡ ಹಾಗೂ ಬಾಲಕಿಯರಿಗೆ ಶೌಚಾಲಯ ಕಟ್ಟಡದ ಬಗ್ಗೆ ಹಣ ದುರುಪಯೋಗವಾಗಿದೆ ಎಂದು ಸದರಿ ನಿಪಿ-10 ರಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. 2010-11 ರಲ್ಲಿ ನಮ್ಮ ಸಂಸ್ಥೆಯಲ್ಲಿ ಎಷ್ಟು ಹಣ ಇತ್ತು  ಎಂದು ನನಗೆ ಹೇಳಲು ಆಗುವುದಿಲ್ಲ. ಒಂದು ವರ್ಷದಲ್ಲಿ ನಮ್ಮ ಸಂಸ್ಥೆಯ ಆದಾಯ ಒಂದು ಕೋಟಿಗಿಂತಾ ಹೆಚ್ಚು ಇರುತ್ತದೆ. ಶೇ.75 ರಷ್ಟು ಖರ್ಚು ಬರಬಹುದು. ಸದರಿ ದಾಖಲೆಗಳು ಇಲ್ಲದೇ ಇದ್ದ ಖರ್ಚನ್ನು ಹಾಗೂ ನಗದಾಗಿ ನೀಡಿದ ಹಣವನ್ನು, ಬಿಲ್ಸ್ ಇದ್ದು ಆದರೆ ಯಾವುದಕ್ಕೆ ಖರ್ಚು ಮಾಡಿದ್ದಾರೆ ಎಂಬುದಕ್ಕೆ ನಮೂದು ಇಲ್ಲದೇ ಇದ್ದಂತಹ ಖರ್ಚುಗಳನ್ನು ಸೇರಿಸಿ ಒಟ್ಟು ರೂ.10,96,40,296/- ರೂಪಾಯಿ ಎಂದು ನಮೂದು ಮಾಡಲಾಗಿರುತ್ತದೆ. 2010 ರಲ್ಲಿ ಶಾಲಾ ಮಕ್ಕಳು 1500 ಇದ್ದ ಕಾರಣ ನಮ್ಮ ಸಂಸ್ಥೆಗೆ ಆದಾಯ ಹೆಚ್ಚು ಇತ್ತು. ನಿಪಿ-10 ರಲ್ಲಿ ನಮ್ಮ ಸಂಸ್ಥೆಯ ಎಲ್ಲಾ ಆದಾಯವನ್ನು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ಆದಾಯದ ಪ್ರಕಾರ ನಾನು ಹೇಳಿದ ಆದಾಯ ನಮ್ಮ ಸಂಸ್ಥೆಗೆ ಇರಲಿಲ್ಲ ಎಂದರೆ ಸರಿ. ನಾವು ಮಾಡಿಸಿದ ರೀಆಡಿಟ್ ರಿಪೋರ್ಟ್ ಅನ್ನು ಹೊರತುಪಡಿಸಿ ಹಣ

ದುರುಪಯೋಗದ ಬಗ್ಗೆ ಬೇರೆ ದಾಖಲೆಗಳು ಇಲ್ಲ ಎಂದರೆ ಸರಿ. ಬೇರೆ ವರ್ಷದ ಆಡೀಟ್ ರಿಪೋರ್ಟ್ ಮೇಲೆ ನಾನು ಇನ್ನೊಂದು ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಕೇಸು ವಿಚಾರಣೆಯಾಗಿ ವಜಾಗೊಂಡಿರುತ್ತದೆ ಎಂದರೆ ಸರಿ. ಶಾಲಾ ಕಟ್ಟಡ ಹಾಗೂ ಶೌಚಾಲಯದ ಕಟ್ಟಡಕ್ಕೆ ಉಪಯೋಗಿಸಲಾದ ಸಾಮ್ರಾಗ್ರಿಗಳ ಬಗ್ಗೆ ಇಂಜೀನಿಯರ್ ರವರಿಂದ ವರದಿಯನ್ನು ಪಡೆದುಕೊಂಡಿರುವುದಿಲ್ಲ. ಶಾಲೆಯ ಕಟ್ಟಡ, ಕಂಪ್ಯೂಟರ್, ಟೇಬಲ್, ಬೆಂಚ್ ಗಳು, ಶಾಲೆಯ ಸಾಮ್ರಾಗ್ರಿಗಳು ಹಾಗೂ ಶಾಲಾ ಆಟದ ಮೈದಾನ ಕಾಂಕ್ರೀಟ್ ಗೊಳಿಸಿದ ಬಗ್ಗೆ ಹಣ ದುರುಪಯೋಗ ಆಗಿರುತ್ತದೆ ಎನ್ನುವುದನ್ನೂ ಕೂಡಾ ನನ್ನ ಪಿರ್ಯಾದಿನಲ್ಲಿ ಹಾಗೂ ನಿಪಿ-10 ರಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ.

ಕಾಂಟ್ರ್ಯಾಕ್ಟರ್ ಗೋಪಿನಾಥ್ ರವರಿಂದ ಯಾವುದೇ ವರದಿಯನ್ನು ಪಡೆದುಕೊಂಡಿರುವುದಿಲ್ಲ. Day Book, Acquittance Book, Bill Book ಹಾಗೂ ಇತರ ದಾಖಲೆಗಳನ್ನು ಇಟ್ಟುಕೊಳ್ಳಲು ಪ್ರತ್ಯೇಕ ಸಿಬ್ಬಂದಿಗಳು ಇರುತ್ತಾರೆ ಎಂದರೆ ಸರಿ. ಅವರಿಗೆ ಸಂಸ್ಥೆಯಿಂದ ಸಂಬಳವನ್ನು ನೀಡಲಾಗುತ್ತದೆ ಎಂದರೆ ಸರಿ. ಪದಾಧಿಕಾರಿಗಳು ಗೌರವ ನೆಲೆಯಲ್ಲಿ ಕೆಲಸ ಮಾಡುತ್ತಾರೆಯೇ ಹೊರತು ಅವರಿಗೆ ಯಾವುದೇ ರೂಪದ ಹಣ ಮತ್ತು ಸಂಬಳ ಇರುವುದಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಅನುಮಾನಗಳನ್ನು ವ್ಯಕ್ತಪಡಿಸಿರುವುದು ನಿಯಮಗಳನ್ನು ಪಾಲಿಸಿಲ್ಲ ಎನ್ನುವ ಕಾರಣಕ್ಕಾಗಿ ಎಂದರೆ ಸರಿ. ಸಂಸ್ಥೆಯ ಬಾಬ್ತು ಯಾವುದೇ ವ್ಯತ್ಯಾಸಗಳು ಇದ್ದಲ್ಲಿ ಸಹಾಯಕ ಉಪನಿಬಂಧಕರ ಕಛೇರಿಯಲ್ಲಿ (ಎ.ಆರ್.ಸಿ.ಎಸ್) ರಲ್ಲಿ  ತೀರ್ಮಾನ ಆಗಬೇಕು ಎಂದರೆ ಸರಿಯಲ್ಲ. ನಾನು

ರೀಆಡೀಟ್ ರಿಪೋರ್ಟ್ ಆಧಾರದ ಮೇಲೆ ಮಾತ್ರ ಈ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ರೀಆಡಿಟ್ ರಿಪೋರ್ಟ್ ಕೂಡಾ ನಾವು ನೀಡಿದ ದಾಖಲೆ ಆಧಾರದ ಮೇಲೆ ಮಾತ್ರ ಮಾಡಿರುತ್ತಾರೆ ಎಂದರೆ ಸರಿ. ನಿಪಿ-10 ರೀಆಡಿಟ್ ರಿಪೋರ್ಟ್ ಕೂಡಾ ಸದರಿ ಆಡೀಟರ್ ಮೇಲೆ ನನ್ನ ಪ್ರಭಾವವನ್ನು ಬೀರಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರೀಆಡಿಟ್ ರಿಪೋರ್ಟ್ ಗೆ ರೂ.75,000/- ವನ್ನು ಫೀ ಆಗಿ ನೀಡಿರುತ್ತೇನೆ. ಸಚ್ಚಿದಾನಂದ ಆಡೀಟರ್ ರವರು ನಮ್ಮ ಸಂಸ್ಥೆಯಿಂದ ಯಾವುದೇ ಹಣವನ್ನು ತಮ್ಮ ಫೀ ಆಗಿ ತೆಗೆದುಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಚ್ಚಿದಾನಂದರವರು ನಮ್ಮ ಸಂಸ್ಥೆಯಿಂದ ಫೀ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಮ್ಮ ಸಂಸ್ಥೆಯ ಆಡೀಟ್ ಅನ್ನು ಹೆಚ್ಚಿನ ಫೀ ನೀಡಿ ನಮಗೆ ಬೇಕಾದಂತೆ ಬರೆಸಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಪಿರ್ಯಾದನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ-

(3 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.29/2020
PW-1

ಎಸ್ಆರ್ಃ

C.C.No.29/2020
PW-1